# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 72 ಗಂಗಾನಗರ.ಬೆಂಗಳೂರು.

ಸಂಖ್ಯೆ: ಸ.ಅ/ವಾ-72/ಪಿ.ಆರ್/ 24 /2022-23 ದಿನಾಂಕ:-21-01-2023

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ:-ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ:-21-01-2023 ರಂದು ವಾರ್ಡ್ ನಂ:72, ಗಂಗಾನಗರ ಕಚೇರಿ 3ನೇ ಕ್ರಾಸ್, 108 ಬಸ್ ನಿಲ್ದಾಣದ ಹತ್ತಿರ ಹೆಚ್.ಎಂ.ಟಿ ಬಡಾವಣೆ ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ. ಗಿರೀಶ್ ವಿನಾಯಕ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 72 |
| 3 | ಶ್ರೀ ಭಿಂಗಿ ಭೀಮಣ್ಣ | ವಾರ್ಡ ಸದಸ್ಯರು |
| 4 | ಶ್ರೀ ಪಿ.ವಿ.ಜಗನ್ನಾಥ್ ರಾವ್ | ವಾರ್ಡ ಸದಸ್ಯರು |
| 5 | ಶ್ರೀ ಶ್ರೀನಿವಸ್.ಕೆ | ವಾರ್ಡ ಸದಸ್ಯರು |
| 6 | ಶ್ರೀಮತಿ ಡಾ ಶಾಲಿನಿ ದೇಶಪಾಂಡೆ | ವಾರ್ಡ ಸದಸ್ಯರು |
| 7 | ಶ್ರೀಮತಿ ನಾಗವೇಣಿ | ವಾರ್ಡ ಸದಸ್ಯರು |
| 8 | ಶ್ರೀ ವಸಂತಕುಮಾರ್ | ವಾರ್ಡ ಸದಸ್ಯರು |
| 9 | ಶ್ರೀ ವೇದಕುಮಾರ್ | ವಾರ್ಡ ಸದಸ್ಯರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ ಮೋಹನ್‌ಕುಮಾರ್ ರವರು ಸಭೆಗೆ ಹಾಜರಾದ ಅಧ್ಯಕ್ಷರು, ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಗಿರೀಶ್ ವಿನಾಯಕ್ ರವರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1 ಮೊದಲಿಗೆ ವಾರ್ಡನಲ್ಲಿರುವ ಎಲ್ಲಾ ಹಳೆಯ ಮರಗಳ ರೆಂಬೆಗಳನ್ನು ಕತ್ತರಿಸಲು ಅರಣ್ಯ ಇಲಾಖೆಯವರಿಗ ಸೂಚಿಸಲು ಸಾರ್ವಜನಿಕರು ಕೋರಿದರು.

2 ಹೆಚ್.ಎಂ.ಟಿ ಬಡಾವಣೆಯ 8ನೇ ಕ್ರಾಸ್, 8ಎ ಕ್ರಾಸ್ ಮತ್ತು 4ನೇ ಕ್ರಾಸ್ ನಲ್ಲಿ ನೀರಿನ ಸಮಸ್ಯೆ ಇದ್ದು ಸರಿಪಡಿಸಲು ಸಾರ್ವಜನಿಕರು ಕೋರಿದರು.

3 ಹೆಚ್.ಎಂ.ಟಿ ಆಟದ ಮೈದಾನದ ಬಳಿ ಫುಟ್ ಪಾತ್ ಮೇಲೆ ಇಟ್ಟಿರುವ ಬಲೂನ್ ಅಂಗಡಿಗಳನ್ನು ತೆರವುಗೊಳಿಸಲು ಸಾರ್ವಜನಿಕರು ಕೋರಿದರು.

Scanned with CamScanner

4 ಹೆಚ್.ಎಂ.ಟಿ ಬಡಾವಣೆಯ ಎಲ್ಲಾ ಕ್ರಾಸ್ ಗಳಲ್ಲಿ ಪುಟ್ಪಾತ್ ದುರಸ್ಥಿ ಮತ್ತು ಚರಂಡಿಗಳಲ್ಲಿ ಹೂಳನ್ನು ತೆಗೆಯಲು ಸಾರ್ವಜನಿಕರು ಕೋರಿದರು.

5 ಪೋರ್ ಸೀಸನ್ ಹೋಟೆಲ್ ಬಳಿ ರಸ್ತೆಯಲ್ಲಿ ಆಳವಾದ ಗುಂಡಿ ಇದ್ದು ಇದನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು

6 30 ಸಿ ಬಸ್ ನಿಲ್ದಾಣದ ಬಳಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರಸ್ತೆಯನ್ನು ಅಗೆದಿದ್ದು ಇದನ್ನು ಸರಿಪಡಿಸಲು ಸಾರ್ವಜನಿಕರು ಕೋರಿದರು

7 ವಾರ್ಡ ನಲ್ಲಿರುವ ಬಡಾವಣೆಗಳಲ್ಲಿ ಸುಮಾರು ಕಡೆ ಬೀದಿ ದೀಪಗಳು ರಿಪೇರಿ ಇದ್ದು ಇವುಗಳನ್ನು ಬದಲಾಯಿಸಲು ಸಾರ್ವಜನಿಕರು ಕೋರಿದರು

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 72 ಗಂಗಾನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 72 ಗಂಗಾನಗರ

Scanned with CamScanner